# ಕಾನನ

ಏಪ್ರಿಲ್-2025

ನಿಸರ್ಗದೆಡೆಗೆ ಪಯಣ



WCG
Wildlife Conservation Group

# ಕಾನನ

ನಿಸರ್ಗದೆಡೆಗೆ ಪಯಣ


### ಪ್ರಧಾನ ಸಂಪಾದಕರು

ಡಾ. ಅಶ್ವಥ ಕೆ. ಎನ್.

### ಮುಖ್ಯ ಸಂಪಾದಕರು

ನಾಗೇಶ್ ಓ. ಎಸ್.

### ಸಹ ಸಂಪಾದಕರು

ಧನರಾಜ್ ಎಂ.

ಮಹದೇವ ಕೆ. ಸಿ.

### ಸಂಪಾದಕೀಯ ತಂಡ

ವಿಪಿನ್ ಬಾಳಿಗ ಬಿ. ಎಸ್.

ಆನಂದ್ ಎಸ್.

ಮುರಳಿ ಎಸ್.

ಹುಸೇನ್ ನೇಣಿಕೆ

ಶ್ರುತಿ ರೈ ಕೆ.




© ಧನರಾಜ್ ಎಂ.

ಏಪ್ರಿಲ್–2025

## ಲೇಖನಗಳು


* ಶೂರಾ ಪ್ರೋರರ ಕೇರೆ ಕಥನ – ಸಚಿನ್ ಬಿ. ಎಸ್.
* ಅಗರ ಕೆರೆಯಲ್ಲೊಂದು ದಿನ – ಡಾ. ಅಶೋಕ್ ಕೆ. ಆರ್.
* ಕಾಣದ ಕಾನನ – ಪ್ರಜ್ವಲ್ ಸಿಂಧೂರ್
* ಕಣಜಗಳ ಅದ್ಭುತ ಲೋಕ – ಸಿದ್ಧರಾಮ ಕೂಡ್ಲಿಗಿ
* AC ಯಲ್ಲಿ ಅರಳಿದ ಹೂ... (ವಿವಿ ಅಂಕಣ) – ಜೈಕುಮಾರ್ ಆರ್.
* ಮರುಗಿ ಜೀವಬಿಟ್ಟ ಮರ ನಾನು (ಕವನ) – ರಾಮಲಿಂಗ ಮಾಡಗಿರಿ
* ಪ್ರಕೃತಿ ಬಿಂಬ – ಡಾ. ಅಶ್ವಥ ಕೆ. ಎನ್. ದೀಪ್ತಿ ಎನ್.





ಮುಖಪುಟ ಛಾಯಾಚಿತ್ರ

ಸಾಮಾನ್ಯ ಬೆಕ್ಕಿನ ಹಾವು

ಮುಖಪುಟ

ವಿನೀತ್ ಕರ್ಥ

ವಿನ್ಯಾಸ

ಧನರಾಜ್ ಎಂ.


© ಪವನ್ ಕುಮಾರ್ ಟಿ. ಎಸ್.





# ಶೂರಾ ಘೋರರ ಕೇರೆ ಕಥನ

"ಇವತ್ ಕೊನೆ ಕೊಯ್ಲ್ ಮುಗುಸ್ತ್ವಾ ಇಲ್ಯನ ಮಾರಾಯ" ಎಂದು ಅಪ್ಪ ಹೇಳುವಷ್ಟರಲ್ಲಿ ನೇಣು ಹಿಡಿಯುವ ಹುಡುಗ "ಚಾ ಕೊಡ್ತ್ರಾ" ಎನ್ನುತ್ತಾ ಹಲ್ಕಿರಿದುಕೊಂಡು ಬಂದ. "ಮದ್ಯಾನಕ್ ಮುಗ್ಸ'ಬೋದು" ಅಂದಾಗ ಅಪ್ಪನಿಗೆ ಸಮಾಧಾನವಾಯ್ತು. "ಹಂಗಾರ್ ಒಂದ್ ಕೆಲ್ಸ ಇದೆ. ಕಡೆಗೆ ಹೇಳ್ತೆ. ಹಂಗೇ ಮುಗ್ಸ್ಕಂಡ್ ಓಡಿ ಹೋಗ್ಬೇಡಿ ಹಾ." ಹೂ ಎಂದ ಹುಡುಗ ಟೀ ಕ್ಯಾನು ತೆಗೆದುಕೊಂಡು ತೋಟಕ್ಕೆ ಓಡಿದ.

ನಮ್ಮ ಮನೆಯಲ್ಲೊಂದು ಗೋಡಾನಿದೆ. ಅಡಕೆ, ಹಿಂಡಿ, ಕೆಲಸದ ಪರಿಕರ ಹೀಗೆ ಹತ್ತು ಹಲವು ವಸ್ತುಗಳನ್ನು ತುಂಬಿ ಬಿಡುತ್ತಿದ್ದೆವು. ಕಳೆದ ಸಲದ ಒಣಗೋಟು ಅಡಿಕೆಯ ಚೀಲಗಳು ಕಾರಣಾಂತರಗಳಿಂದ ಮಂಡಿಗೆ ಸೇರದೆ ಉಳಿದುಬಿಟ್ಟಿದ್ದವು. ಗೋಡಾನಿನಲ್ಲಿ ಓಡಾಡಲು ಹೊರತುಪಡಿಸಿ ಜಾಗವೇ ಇಲ್ಲದಾಗಿತ್ತು. ಮಾಡಿನ ಸಂದಿನಿಂದೆಲ್ಲೋ ಸೇರಿಕೊಂಡ ಇಲಿಗಳು ಅರಮನೆಯೇ ಸಿಕ್ಕಿತು ಎಂದು ಭಾವಿಸಿದಂತೆ ಸಂಸಾರ ಪ್ರಾರಂಭಿಸಿ ಎಲ್ಲಾ ಚೀಲಗಳಿಗೂ ತೂತು ಕೊರೆದು ಹೆದ್ದಾರಿ ಮಾಡಿಕೊಂಡಿದ್ದವು. ಎಲ್ಲಾ ಚೀಲಗಳನ್ನು ಹೊರಗೆ ಹಾಕದೇ ಇಲಿಗಳ ದಮನ ಸಾಧ್ಯವೇ ಇರಲಿಲ್ಲ. ಕೊನೆ ಕೊಯ್ಲಾದ ಮೇಲೆ ಆ ಹುಡುಗರಿಂದ ಮೂಷಿಕ ದಮನ ಮಾಡಿಸಬೇಕು ಎಂದು ಅಪ್ಪ ಯೋಚಿಸಿದ್ದ. ಮರಿಯ, ರಾಜೇಶ ಮತ್ತಿಬ್ಬರು ಹುಡುಗರು ತೋಟದ ಕೆಲಸ ಮುಗಿಸಿ ಉಂಡು ಬಂದರು. ಎಲ್ಲರ ಕೈಗೂ ಒಂದೊಂದು ದೊಣ್ಣೆಯನ್ನು ಕೊಟ್ಟೆ. ಯುದ್ಧಕ್ಕೆ ಹೊರಡುವ ಮೊದಲು ಚೀಲಗಳನ್ನು

ಹೊರ ಹಾಕಬೇಕಲ್ಲಾ! ನಾನೂ ಸೇರಿಕೊಂಡೆ. ಸರಿಸುಮಾರು ಎಲ್ಲವೂ ತೂತಾಗಿದ್ದರಿಂದ ಒಣ ಅಡಿಕೆ ಉದುರಿ ಬೀಳತೊಡಗಿದವು. ಇನ್ನೊಂದೆರಡು ಸಾಲು ಉಳಿದಿವೆ ಅನ್ನುವಾಗ ಒಂದು ಚೀಲದ ಸಂದಿಯಲ್ಲಿ ಕಪ್ಪಗಿನ ಬೆಲ್ಟಿನಂಥದ್ದೇನೋ ಕಂಡಿತು. ಒಂದೇ ನೋಟಕ್ಕೆ ಇದು ಹಾವೇ ಎಂಬುದು ನನಗೆ ಸ್ಪಷ್ಟವಾದರೂ ನಿಧಾನಕ್ಕೆ ಚೀಲವನ್ನೆತ್ತಿ ರಾಜೇಶನ ತಲೆಗೆ ಏರಿಸಿದೆ. ಕಪ್ಪಗಿನ ಕೇರೆ ಹಾವು ಬೆಚ್ಚಗೆ ಸುರುಳಿ ಸುತ್ತಿಕೊಂಡು ಮಲಗಿತ್ತು.




ಸರಿಸುಮಾರು ಒಂದೂವರೆ ಮಾರಿನಷ್ಟು ಉದ್ದವಿದ್ದ ಕೇರೆ ಹಾವನ್ನು ಕಾಣುತ್ತಲೇ ಎಲ್ಲರೂ ಹೌಹಾರಿ ಹೊರಗೆ ಧಾವಿಸಿದರು. ನಿದ್ದೆಗಣ್ಣಿಂದ ಎಚ್ಚೆತ್ತ ಹಾವು ತಬ್ಬಿಬ್ಬಾಗಿ ಇಲಿಗಳ ಹೆದ್ದಾರಿಯ ಒಳಗೆ ಸೇರಿಕೊಂಡುಬಿಟ್ಟಿತು. "ಲೇ. . . ಹಾವಲೇ. . .", " ಒಡು ಒಡು ಕೋಲ್ ತಕ ಬಾ". "ಅದೇನ್ ವಿಷದ್ ಹಾವಲ್ಲ ಸುಮ್ನಿರಿ ಮಾರಾಯ. ಅದ್ ಎಂತ ಮಾಡದಿಲ್ಲ", ಹೌದೆಂದು ಗೋಣಲ್ಲಾಡಿಸಿ ಒಬ್ಬೊಬ್ಬರೇ ಒಳ ಬಂದರು. ಉಳಿದ ಎಲ್ಲಾ ಚೀಲಗಳನ್ನೂ ನಿಧಾನಕ್ಕೆ ಸರಿಸಿ ಹೊರಗೆ ಸೇರಿಸಿದೆವು. ದೊಣ್ಣೆಗಳ ದುರಾದೃಷ್ಟಕ್ಕೆ ಎಲ್ಲಾ ಇಲಿಗಳನ್ನೂ ಹಾವು ಸ್ವಾಹಾ ಮಾಡಿತ್ತು. ಅದೆಷ್ಟು ದಿನಗಳಿಂದ ಸೇರಿಕೊಂಡಿತ್ತೋ ಏನೋ. ದೇಹದ ಪುಷ್ಟಿಯನ್ನು ಗಮನಿಸಿದರೆ ಅದು ಇಲ್ಲಿರುತ್ತಾ ಬಹಳ ದಿನಗಳೇ ಕಳೆದಿರಬೇಕು.



ನಮ್ಮನೆ ಬೆಕ್ಕಂತೂ ಅದೇ ರೂಮಿನಲ್ಲಿ ದಿನಾ ಮಲಗುತ್ತಿತ್ತು. ಒಂದು ದಿನವೂ ಇಲಿಯನ್ನು ಹಿಡಿಯುತ್ತಿರಲಿಲ್ಲ. ಜೆರ್ಸಿ ಹಾಲಿನ ಪರಮಭಕ್ತನಾದ ಅದು 'ಕೂಡಿ ಬಾಳಿದರೆ ಸ್ವರ್ಗ ಸುಖ' ಎಂಬಂತೆ ಹಿಂಡಿಯನ್ನೂ ಇಲಿಗಳ ಜೊತೆ ಹಂಚಿ ತಿನ್ನುತ್ತಿತ್ತು. ಹಾವನ್ನು ಕಂಡಿದ್ದರೂ ಸೋಂಬೇರಿಯಾಗಿದ್ದರಿಂದ ತಲೆ ಕೆಡಿಸಿಕೊಂಡಿರಲಿಲ್ಲವೇನೋ. ಅಷ್ಟಕ್ಕೂ ಹೆಬ್ಬಾವು ಅಲ್ಲವಲ್ಲ. "ಥೋ ಇದೆಲ್ಲಿಂದ ಬಂದು ಸೇರಿಕೊಳ್ತೋ ಮಾರಾಯ" ಎಂದು ಗೊಣಗುತ್ತಾ ಅಪ್ಪ ಕಿಟಕಿಗಳನ್ನು ಪೂರ್ತಿ ತೆರೆದು ಅಳಿದುಳಿದ ಸಣ್ಣ ಪುಟ್ಟ ಸಾಮಾನುಗಳನ್ನು ಆಚೆ ಹಾಕಲು ನಿರ್ದೇಶಿಸಿದ. ಎರಡು ಕಪಾಟುಗಳನ್ನು ಮಾತ್ರ ಜರುಗಿಸಲು ಸಾಧ್ಯವಿರಲಿಲ್ಲ. ರಾಜೇಶ ಮತ್ತು ಗ್ಯಾಂಗ್ ಕೋಲುಗಳನ್ನು ಸನ್ನದ್ಧಗೊಳಿಸಿದರು.





ಕಾಡಿನ ಹುಡುಗರಾದ ರಾಜೇಶ ಹಾಗೂ ಅವನ ಗೆಳೆಯರಿಗೆ ಕೇರೆ ಹಾವನ್ನು ಓಡಿಸುವುದು ಬಹಳ ಸುಲಭವೆಂದೇ ತಿಳಿದಿದ್ದೆ. ಹಾವು ಬೆದರದಂತೆ ಜಾಗರೂಕತೆಯಿಂದ ಬಾಗಿಲ ಬಳಿ ಹೋಗುವಂತೆ ಮಾಡುತ್ತಾರೆ ಎಂದು ಹೊರಗಿನಿಂದ ಇಣುಕುತ್ತಿದ್ದೆ. ಹುಡುಗರಿಗೆ ಇದು ಆಟವಾಗಿ ತೋರಿತೆಂದು ಕಾಣುತ್ತದೆ. 'ಏ ಅಲ್ ಬಂತು', 'ಬಡಿ ಬಡಿ', 'ಓಡಲೇ'. ಹಾವು ಗಾಬರಿಯಿಂದ ಅತ್ತಿಂದಿತ್ತ ಸರಿದಾಡತೊಡಗಿ ಕೊನೆಗೆ ಕಪಾಟಿನ ಅಡಿಯಿಂದ ಮೇಲಕ್ಕೆ ಎಲ್ಲೋ ಒಳಗೆ ಅವಿತುಬಿಟ್ಟಿತು. ಈ ಆಟಗಳಿಂದ ಸಿಟ್ಟುಗೊಂಡ ನಾನು ಇದೀಗ ನನ್ನ ಸರದಿ ಎಂಬಂತೆ ಇನ್ಸ್ಟಾಗ್ರಾಮು ಹಾಗೂ ಯುಟ್ಯೂಬುಗಳಲ್ಲಿ ಹಾವುಗಳನ್ನು ಹಿಡಿಯಲು ಉಪಯೋಗಿಸುವ ಚೀಲ ಹಾಗೂ PVC ಪೈಪಿನ ಸಣ್ಣ ತುಂಡೊಂದನ್ನು ಹುಡುಕಿಕೊಂಡು ಬಂದೆ. ಚೀಲದ ಬಾಯಿಯನ್ನು ಪೈಪಿಗೆ ಸುತ್ತಿ ಹಗ್ಗದಿಂದ ಕಟ್ಟಿದೆ. ನನ್ನ ಈ ಆನ್ಲೈನ್ ಜ್ಞಾನಕ್ಕೆ ನಾನೇ ಮನದೂಗಿ ಈ ಚೀಲದೊಳಗೆ ಹಾವು ನುಗ್ಗಿ ಹಿಡಿಯುವಾಗ ಎಲ್ಲರೆದುರು ಶಭಾಸುಗಿರಿಯನ್ನು ಗಿಟ್ಟಿಸಬಹುದು ಎಂದು ದುರಾಲೋಚನೆ ಮಾಡಿದೆ.




ಅಷ್ಟರಲ್ಲಿ ಕಪಾಟನ್ನು ಅಡ್ಡ ಮಲಗಿಸಲಾಗಿತ್ತು. ಹಾವು ಅದರಡಿ ಸಿಕ್ಕಿ ಅಪ್ಪಚ್ಚಿಯಾಯಿತು ಎಂತಲೇ ನಾನು ಭಾವಿಸಿದೆ. ನನ್ನ ಚೀಲವನ್ನು ಗೋಡೆಯ ಮೂಲೆಯಲ್ಲಿ ಹಾವು ಹಿಂದೆ ಓಡಾಡಿಹೋದ ದಾರಿಯಲ್ಲಿ ಮಲಗಿಸಿ ಅತ್ತ ಹಾವನ್ನು ಓಡಿಸಿ ಎಂದೆ. ನನ್ನಪ್ಪನಿಗೆ ನನ್ನ ಈ ಧೈರ್ಯತನವನ್ನು ಕಂಡು ದಿಗಿಲಾಯ್ತು. ಅಷ್ಟರವರೆಗೆ ಅಂಗಳದಲ್ಲಿ ನಮ್ಮ ಹುಡುಗಾಟಿಕೆಯನ್ನು ನೋಡುತ್ತಾ ಕೌಳ ಮೆಲ್ಲುತ್ತಿದ್ದ ಮರಿಯನಿಗೆ ರೋಸಿ ಹೋಯ್ತು. ಅದೆಲ್ಲಿಂದಾಲೋ ಬಲೆಯನ್ನು ತಂದು ಹಾವಿನ ಮೇಲೆ ಎಸೆದ. ಹಾವು ಒಂದಷ್ಟು ಒದ್ದಾಡಿ ಬಲೆಯಲ್ಲಿ ಸಿಲುಕಿ ಹಾಕಿಕೊಂಡಿತು. ಹೀರೋನಂತೆ ಪೋಸು ಕೊಡಬೇಕೆಂದು ಕಾದಿದ್ದ ನನ್ನ ಪ್ಲಾನು ಠುಸ್ಸಾಯ್ತು. ನಾನು ಬಾಗಿಲ ಹೊರಗೆ ಪೆಚ್ಚಾಗಿ ಬಂದು ನಿಂತೆ. ಹಾವು ಸೋಲೊಪ್ಪಲಿಲ್ಲ. ಕೊಸರಾಡಿ ಬಲೆಯಿಂದ ತಪ್ಪಿಸಿಕೊಂಡು ಸೀದಾ ಬಾಗಿಲ ಹೊರಗೆ ಚಿಮ್ಮಿತು. ನಾನು ಬದಿಗೆ ಹಾರಿಕೊಂಡೆ. ಸತ್ತೇನೋ ಬಿಟ್ಟೇನೋ ಎಂಬಂತೆ ಕಂಗಾಲಾಗಿದ್ದ ಕೇರೆ ಹಾವು ಮನೆಯ ಪಕ್ಕದಲ್ಲಿದ್ದ ತೆಂಗಿನಕಾಯಿಗಳ ರಾಶಿಯೊಳಗೆ ಅಂತರ್ಧಾನವಾಯ್ತು.

"ಮತ್ ಬತ್ ಅದು; ಒಮ್ಮೆ ಇಲಿ ಕಂಡ್ ಮೇಲ್ ಬಿಡುದಿಲ್ಲ" ಎಂದು ಮರಿಯ ತನ್ನ ಜ್ಞಾನವನ್ನು ಹಂಚಿಕೊಂಡ. ಎಲ್ಲರೂ ಹ್ಞೂ ಗುಟ್ಟಿದೆವು. ಅಷ್ಟರವರೆಗೂ ಯಾರೂ ಗೋಡಾನಿನ ಇನ್ನೊಂದು ಮೂಲೆಯನ್ನು ಗಮನಿಸಿರಲಿಲ್ಲ. ಎರಡು ಇಲಿಗಳು ಬಚ್ಚಿಟ್ಟುಕೊಳ್ಳಲು ಜಾಗ ಹುಡುಕುತ್ತಿದ್ದವು. ರಾಜೇಶನಿಗೆ ಮತ್ತೆ ಹುಮ್ಮಸ್ಸು ಬಂತು. "ಹೊಡಿರಲೇ...", "ಒಡ್ರುಲೇ...", "ಬಾರ್ಸಲೇ!!"




ಲೇಖನ: ಸಚಿನ್ ಬಿ. ಎಸ್.


ಶಿವಮೊಗ್ಗ ಜಿಲ್ಲೆ




# ಅಗರ ಕೆರೆಯಲ್ಲೊಂದು ದಿನ

ಕನಕಪುರದ ಬಳಿ ಒಂದು ಕಾರ್ಯಕ್ರಮಕ್ಕೆ ಹೋಗುವುದಿತ್ತು. ನೈಸ್ ರಸ್ತೆಯ ಕನಕಪುರ ಜಂಕ್ಷನ್ನಿನ ಹತ್ತಿರದಲ್ಲೇ ಇರುವ ಅಗರ ಕೆರೆಗೆ ಬಹಳ ವರುಷಗಳ ಹಿಂದೆ ಒಂದು ಬಾರಿ ಹೋಗಿದ್ದೆ. ಆ ಕೆರೆ ಈಗ ಹೇಗಿದೆ, ಪಕ್ಷಿಗಳಿದ್ದಾವೋ ಇಲ್ಲವೋ ನೋಡೋಣವೆಂದುಕೊಂಡು ಬೆಳಗಿನ ಆರರ ಸಮಯದಷ್ಟೊತ್ತಿಗೆ ಅಗರ ಕೆರೆಯನ್ನು ತಲುಪಿದೆ. ಈ ಬಾರಿ ವಾಡಿಕೆಗಿಂತ ಹೆಚ್ಚು ಮಳೆಯಾಗಿದ್ದ ಕಾರಣ ಅಗರ ಕೆರೆ ತುಂಬಿ ನಿಂತಿತ್ತು. ಕೆರೆಯ ಒಂದು ಬದಿಯಲ್ಲಿ ನಮ್ಮ ಅಭಿವೃದ್ಧಿಯ ಕುರುಹಾಗಿ ಕೆಲವು ಹೊಸ ಕಟ್ಟಡಗಳು ನಿರ್ಮಾಣವಾಗುತ್ತಿದ್ದವು. ಮತ್ತೊಂದು ತುದಿಯಲ್ಲಿ ಕಿರು ಅರಣ್ಯ ಹರಡಿಕೊಂಡಿತ್ತು. ಭಾನುವಾರವಾಗಿದ್ದರಿಂದ ಜನರ ಸಂಖ್ಯೆ ಹೆಚ್ಚಾಗಿಯೇ ಇತ್ತು.

ಕೆರೆಗಳು ನೀರು ತುಂಬಿಕೊಂಡಿರುವಾಗ ಪಕ್ಷಿಗಳ ಸಂಖ್ಯೆ ಒಂದಷ್ಟು ಕಡಿಮೆಯೆಂದೇ ಹೇಳಬೇಕು. ಒಂದಷ್ಟು ಗುಳುಮುಳುಕ, ಬೆಳ್ಳಕ್ಕಿ, ಬೂದು ಕೊಕ್ಕರೆ, ನೀರುಕಾಗೆ ಬಿಟ್ಟರೆ ಹೆಚ್ಚಿನ ಪಕ್ಷಿಗಳು ಕಾಣಿಸಲಿಲ್ಲ. ಮಂಜು, ಕೆರೆಯ ಮೇಲ್ಮೈಯನ್ನು ಆವರಿಸಿತ್ತು. ಮಂಜಿನ ಹಿನ್ನಲೆಯಲ್ಲಿ ಗುಳುಮುಳುಕದ ಫೋಟೋ ತೆಗೆಯುವಷ್ಟರಲ್ಲಿ ಮಂಜಿನ ಹೊದಿಕೆ ಮತ್ತಷ್ಟು ದಟ್ಟವಾಯಿತು. ಎದುರಿನ ಅರಣ್ಯದ ಭಾಗ ಕಾಣಿಸದಂತಾಯಿತು. ಬೆಳಕರಿಯುವ ಮುನ್ನವೇ ತೆಪ್ಪದಲ್ಲಿ ಮೀನು ಹಿಡಿಯಲು ಅತ್ತ ಕಡೆಗೆ ಸಾಗಿದ್ದವರು ಮಂಜಿನ ಹೊದಿಕೆಯಲ್ಲಿ ಇತ್ತ ಕಡೆಯ ತೀರಕ್ಕೆ ಸಾಗಿ ಬರುತ್ತಿದ್ದ ದೃಶ್ಯ ವೈಭವಯುತವಾಗಿತ್ತು. ಗಿಡಮರಗಳ ಪ್ರತಿಬಿಂಬದ ಚಿತ್ರಗಳನ್ನು ಕ್ಯಾಮೆರಾಗೆ ತುಂಬಿಕೊಂಡೆ. ಕೊಂಚ ಸಮಯ ಕಳೆದ ನಂತರ ಮಂಜಿನ ಹೊದಿಕೆ ನಿಧಾನವಾಗಿ ಸರಿದುಕೊಳ್ಳಲಾರಂಭಿಸಿತಾದರೂ ರವಿಯು ಮೋಡದ ನಡುವಿನಿಂದ ಹೊರಬರಲು ಉತ್ಸಾಹ ತೋರಲಿಲ್ಲ.


© ಡಾ. ಅಶೋಕ್. ಕೆ. ಆರ್.


© ಡಾ. ಅಶೋಕ್. ಕೆ. ಆರ್.



© ಡಾ. ಅಶೋಕ್. ಕೆ. ಆರ್.

ಬಿಸಿಲಿಗೆ, ಚಳಿ ಕಡಿಮೆಯಾದ ಮೇಲೆ ನೀರಿಗಿಳಿಯಬಹುದಾದ ಪಕ್ಷಿಗಳಿಗೆ ಕಾಯುತ್ತ ಅಲ್ಲೆ ಒಂದೆಡೆ ದಡದ ಪಕ್ಕದಲ್ಲಿ ಕುಳಿತೆ. ಎಡಬದಿಯಲ್ಲಿ, ಸ್ವಲ್ಪ ದೂರದಲ್ಲಿ ಇಬ್ಬರು ಹುಡುಗಿಯರು ಕೆರೆಯ ಸುತ್ತಮುತ್ತಲಲ್ಲಿ ವಾಸ ಮಾಡಿಕೊಂಡಿದ್ದ ಕಪ್ಪು – ಬಿಳುಪು ನಾಯಿಯೊಂದರ ಜೊತೆ ಗೆಳೆತನ ಬೆಳೆಸಿಕೊಳ್ಳುತ್ತಿದ್ದರು. ಅವರು ಕುಳಿತಿದ್ದ ಜಾಗದಲ್ಲಿ ಬೆಳೆದಿದ್ದ ಹಳದಿ ಹೂವಿನ ಗಿಡದ ಹೊದಿಕೆ, ಆ ಇಬ್ಬರು ಹುಡುಗಿಯರು, ಅವರೊಡನೆ ಆಟವಾಡುತ್ತಿದ್ದ ನಾಯಿಯ ಪ್ರತಿಬಿಂಬವೆಲ್ಲವೂ ಕೆರೆಯ ಶಾಂತ ನೀರಿನಲ್ಲಿ ಚಿತ್ತಾರ ಮೂಡಿಸಿತ್ತು. ಇಂತಹ ದೃಶ್ಯಾವಳಿಯನ್ನು ಕಣ್ಣಿನಲ್ಲಷ್ಟೇ ಅಲ್ಲ, ಕ್ಯಾಮೆರಾದಲ್ಲೂ ಸೆರೆಹಿಡಿದರೆ ಚೆಂದವಲ್ಲವೇ ಎಂದುಕೊಳ್ಳುತ್ತಾ ಅವರನ್ನು ಕೂಗಿ ಕರೆದು 'ಒಂದು ಫೋಟೋ' ಎಂದು ಕೇಳಿ ಅನುಮತಿ ತೆಗೆದುಕೊಂಡು ಫೋಟೊ ತೆಗೆದು ಅವರ ಬಳಿ ಹೋಗಿ ಮೊಬೈಲಿಗೆ ಕಳಿಸಿ ಮತ್ತೆ ಬಂದು ದಡದಲ್ಲಿ ಪಕ್ಷಿಗಳಿಗೆ ಕಾಯುತ್ತ ಕುಳಿತೆ. ನೀರ ಪಕ್ಷಿಗಳ ಸುಳಿವಿರಲಿಲ್ಲ.

ಅಷ್ಟರಲ್ಲಿ ತೆಪ್ಪದಲ್ಲಿಡಿದು ತಂದಿದ್ದ ಮೀನುಗಳನ್ನು ಸ್ವಚ್ಛಗೊಳಿಸುವ ಕಾರ್ಯ ಪ್ರಾರಂಭವಾಗಿತ್ತು. ಮೀನಿನ ಹೊಟ್ಟೆ, ಸಣ್ಣ ಕರುಳು, ದೊಡ್ಡ ಕರುಳು, ಹೃದಯಗಳನ್ನೆಲ್ಲಾ ನಾವು ತಿನ್ನುವುದಿಲ್ಲವಲ್ಲ. ಅದನ್ನೆಲ್ಲಾ ತೆಗೆಯುತ್ತಾ ಅಲ್ಲೇ ಮಣ್ಣಿನ ಮೇಲೆ ಒಂದಷ್ಟನ್ನು ನೀರಿಗೆ ಎಸೆಯುತ್ತಿದ್ದುದನ್ನೇ ಕಾಯುತ್ತಿದ್ದಂತೆ ಹತ್ತಾರು ಗರುಡಗಳು ಮತ್ತು ಒಂದೆರಡು ಹದ್ದುಗಳು ಕೆರೆಯ ಮೇಲಿನಾಕಾಶದಲ್ಲಿ ಪ್ರತ್ಯಕ್ಷವಾದವು. ಮೀನು ಹಿಡಿಯುವವರ ಗೆಳೆಯರೇ ಆಗಿಹೋಗಿದ್ದ ಈ ಪಕ್ಷಿಗಳು ಅವರ ತೀರ ಹತ್ತಿರ ಬಿದ್ದಿದ್ದ ಆಹಾರವನ್ನೂ ಹೊತ್ತೊಯ್ದು ಗಾಳಿಯಲ್ಲೇ ತಿಂದು ಮತ್ತೆ ಹಿಂದಿರುಗುತ್ತಿದ್ದವು. ನೀರಿಗೆ ಎಸೆಯುತ್ತಿದ್ದ ಆಹಾರವನ್ನು ಎತ್ತಿಕೊಳ್ಳಲು ಶಾಂತವಾಗಿದ್ದ ಕೆರೆಯ ನೀರಿನಲ್ಲಿ ಪಕ್ಷಿಗಳ ಪ್ರತಿಬಿಂಬ, ನೀರ ಹನಿಗಳ ಚಿಮ್ಮುವಿಕೆಯ ಫೋಟೋ ತೆಗೆಯಲು ಕ್ಯಾಮೆರಾದ ಶಟರ್ ವೇಗವನ್ನು ಹೆಚ್ಚಿಸಿಕೊಂಡೆ. ಮೋಡಗಳ ಮರೆಯಿಂದ ರವಿಯ ಕಿರಣಗಳು ಪಕ್ಷಿಗಳ ಮೇಲೆ, ನೀರ ಹನಿಗಳ ಮೇಲೆ ಬೀಳುತ್ತಾ ಸುಂದರ ಲೋಕವೇ ಕೆರೆಯ ಮೇಲೆ ಸೃಷ್ಟಿಯಾಯಿತು. ತೃಪ್ತಿಯಾಗುವಷ್ಟು ಫೋಟೋಗಳನ್ನು ತೆಗೆದು ದಡದಿಂದ ಎದ್ದವನಿಗೆ ಮೋಡ ಮಂಜಿನ ಹೊದಿಕೆಯಿಂದ ರವಿಯ ಕಿರಣಗಳು ನೃತ್ಯವಾಡುತ್ತಿದ್ದ ದೃಶ್ಯ



© ಡಾ. ಅಶೋಕ್. ಕೆ. ಆರ್.

ಕಂಡಿತು. ಕ್ಯಾಮೆರಾದ ಲೆನ್ಸ್ ಬದಲಿಸಿ ಬಣ್ಣರಹಿತ ‘ನಾರ್ತರ್ನ್ ಲೈಟ್‌ನಂತೆ’ ಕಾಣುತ್ತಿದ್ದ ರವಿಯ ಕಿರಣಗಳ ಫೋಟೋ ತೆಗೆದುಕೊಂಡು ಬಂದವನಿಗೆ ಕೆರೆ ನೋಡಲು ಬಂದಿದ್ದ ಕೆಲವು ಫೇಸ್‌ಬುಕ್ ಗೆಳೆಯರು ಆಕಸ್ಮಿಕವಾಗಿ ಭೇಟಿಯಾದರು. ಅವರೊಡನೆ ಸ್ವಲ್ಪ ಸಮಯ ಹರಟಿ ಅಗರ ಕೆರೆಗೆ ವಿದಾಯ ಹೇಳಿ ಹೊರಟೆ. ಕೆರೆಯ ದಡಕ್ಕೆ ಹೊಂದಿಕೊಂಡಿದ್ದ ಮರವೊಂದರ ಮೇಲೆ ಪಿಕಳಾರಗಳು ಕಾಣಿಸಿಕೊಂಡವು. ಬಿಸಿಲು ಬೀಳಲಾರಂಭಿಸಿದ್ದ ರೆಂಬೆಯ ಮೇಲೆ ಕುಳಿತು ಮೈಕಾಯಿಸಿಕೊಳ್ಳುತ್ತ, ಹಣ್ಣು ತಿನ್ನುತ್ತಿದ್ದ ಪಿಕಳಾರ ಹಕ್ಕಿಗಳು ‘ಬರೀ ಕೆರೆಯೊಳಗಿನ ಪಕ್ಷಿಗಳ ಫೋಟೋ ತೆಗೆಯೋಕೆ ಬಂದಿದ್ದಾ? ಇಲ್ಲೇ ಇರುವ ನಮಗೆ ಬೆಲೆಯೇ ಇಲ್ಲ ಅಲ್ಲವೇ? ಎಂದು ಅಣಕಿಸಿದವು. ‘ಹೇ ಹೇ ಹಂಗೇನಿಲ್ಲ’ ಎಂದೇಳುತ್ತಾ ಮತ್ತೆ ದೊಡ್ಡ ಲೆನ್ಸನ್ನು ಕ್ಯಾಮೆರಾಕ್ಕೆ ಹಾಕಿ ಪಿಕಳಾರ ಪಕ್ಷಿಗಳದೊಂದಷ್ಟು, ಅಲ್ಲೇ ದಡದ ಬಳಿ ಇದ್ದ ಮಿಂಚುಳ್ಳಿಯದೊಂದು ಫೋಟೋ ತೆಗೆದು ಒಂದು ಸುಂದರ ಸಮಾಧಾನಕರ ಬೆಳಗಿಗೆ ಕಾ ರಣವಾದ ಎಲ್ಲರಿಗೂ ಧನ್ಯವಾದಗಳನ್ನು ಹೇಳುತ್ತಾ ಕಾರು ಹತ್ತಿದೆ.











**ಲೇಖನ: ಡಾ. ಅಶೋಕ್ ಕೆ. ಆರ್.**

ಬೆಂಗಳೂರು ಜಿಲ್ಲೆ




# ಕಾಣದ ಕಾನನ

ನೋಟದುದ್ದಕ್ಕೂ ಕಾಣುವ ಹಸಿರು, ಹಸಿರು ಹೊದ್ದ ಗುಡ್ಡ ಬೆಟ್ಟಗಳು, ಎತ್ತರ ಮರ, ಹರಿಯುವ ನದಿ, ನೆಲಕ್ಕಂಟಿರುವ ಪಾಚಿ, ಪಕ್ಷಿಗಳ ಚಿಲಿಪಿಲಿ, ದಾರಿಯುದ್ದಕ್ಕೂ ನೆರಳು.

ಕಾಡು ಎಂದಾಕ್ಷಣ ಎಲ್ಲರಲ್ಲೂ ಮೂಡುವ ಸಹಜ ಚಿತ್ರಣವಿದು, ಆದರೆ ಇದಕ್ಕೂ ಮೀರಿ ಕಾಣದ ಕಾನನಗಳೂ ಉಂಟು. ರಣ ಬಿಸಿಲು, ಅಲ್ಲಲ್ಲಿ ತೇಪೆಯಂತೆ ಬೆಳೆದಿರುವ ಮರಗಳು, ಕುಬ್ಜ ಗಿಡಗಳು, ಬಿಸಿಲಿಗೆ ಕಾದ ಕಲ್ಲು ಬಂಡೆಗಳು, ಒಣ ಹವೆ, ಅಲ್ಲಲ್ಲಿ ಪುಟ್ಟ ಕೊಳ್ಳಗಳಲ್ಲಿ ನೀರಿನ ಮೂಲ, ಇದಕ್ಕೆ ಹೊಂದಿಕೊಂಡಂತೆ ತನ್ನದೇ ಪ್ರಾಣಿವರ್ಗ, ವಿಶಿಷ್ಟ ಸಸ್ಯಸಂಪತ್ತು ಇವು ಕರ್ನಾಟಕದ ಬಹುಭಾಗದ ಪಾಲುದಾರಿಕೆ ಹೊಂದಿರುವ ಕುರುಚಲು ಗುಡ್ಡಗಾಡು ಅರಣ್ಯಗಳು. ಸಾಧಾರಣ ಎತ್ತರಕ್ಕೆ ಬೆಳೆಯುವ ಮರಗಳು, ನೆಟ್ಟ ವಿವಿಧ ಉಪಯೋಗಿ ಮರಗಳು ಕರ್ನಾಟಕದ ಉತ್ತರ ಭಾಗದ ತುಂಬೆಲ್ಲಾ ಹರಡಿಕೊಂಡಿರುವ ಈ ಪ್ರದೇಶವು ಭೌಗೋಳಿಕವಾಗಿ ಡೆಕ್ಕನ್ ಪ್ರಸ್ಥಭೂಮಿಗೆ ಒಳಪಡುತ್ತದೆ. ಅದಕ್ಕಾಗಿಯೇ ಡೆಕ್ಕನ್ ಕುರುಚಲು ಕಾಡು ಎಂಬ ಹೆಸರು ಉಂಟು. ಯಾವುದೇ ಇತರ ಕಾಡುಗಳಿಗೆ ಹೋಲಿಸಿದರೆ ಈ ಕಾಡು ತನ್ನದೇ ಆದ ವೈಶಿಷ್ಟ್ಯತೆ ಮತ್ತು ವಿಸ್ಮಯತೆಯನ್ನು ಕಾಯ್ದುಕೊಂಡಿದೆ.





© ಡಾ. ಅಶ್ವಥ ಕೆ. ಎನ್.



© ಡಾ. ಅಶ್ವಥ ಕೆ. ಎನ್.


© ಡಾ. ಅಶ್ವಥ ಕೆ. ಎನ್.

ಸುಮಾರು 700 ಮಿ. ಮೀ ಸರಾಸರಿ ಮಳೆ ಹಾಗು ಗರಿಷ್ಠ 42°c ನಷ್ಟು ತಾಪಮಾನಕ್ಕೆ ಹೊಂದಿಕೊಳ್ಳುವಂತ ಸಸ್ಯಸಂಕುಲ ಈ ಕಾಡನ್ನು ಅಸಾಮಾನ್ಯವಾಗಿಸುತ್ತದೆ. ಗುರಿಯಾ ಹುಲ್ಲು (chrysopogonfluvs) ಛಾವಣಿ ಹುಲ್ಲು (heteropogon contortus) ಕಾಗೇಪಾದ (dactyloctenium) ದಂತಹ ಹುಲ್ಲುಗಳು ಪ್ರಾಣಿಗಳಿಗೆ ಮೇವು ಅಷ್ಟೇ ಅಲ್ಲದೆ ಮನುಕುಲಕ್ಕೆ ಪೊರಕೆ, ಛಾವಣಿಗೆ ಆಸರೆಯಾಗಿವೆ. ಬೇವು (Azadirachta indica), ನೀಲಗಿರಿ (Eucalyptus), ಹೊಂಗೆಯಂತಹ (Pongamia pinnata) ಎತ್ತರದ ಮರಗಳು; ಇಂಗಳ (balanites roxburghii), ಛತ್ರಿ ಗಿಡ, ಜರಿಗಿಡ (Psilotum nudum), ಬೆಡ್ಡೋಮಿ ಗಿಡ (Cycas beddomei) ನಂತಹ ಮುಳ್ಳಿನ ಪ್ರಭೇದಕ್ಕೆ ಸೇರಿದ ಗಿಡಗಳು ಮಾನವನಿಗೆ ನೈಸರ್ಗಿಕ ಸಂಪನ್ಮೂಲವಾಗಿ, ಅನೇಕ ಔಷಧೀಯ ಗುಣಗಳನ್ನೂ ಹೊಂದಿವೆ. ಚಳ್ಳೆ ಗಿಡ (cordia myxa), ಕಾಡು ಬಾರೆ (Ziziphus genus), ಕರಂಡೆ (Carissa carandas) ದಂತಹ ಗಿಡಗಳು ತಮ್ಮ ಆಕರ್ಷಕ ಹಣ್ಣುಗಳಿಂದ ಅನೇಕ ವಿಧದ ಪ್ರಾಣಿ-ಪಕ್ಷಿಗಳನ್ನು ತನ್ನತ್ತ ಸೆಳೆದುಕೊಳ್ಳುತ್ತವೆ, ಗದಗದ ಕಪ್ಪತಗುಡ್ಡ ವನ್ಯಜೀವಿ ಧಾಮ ಇದಕ್ಕೆ ಒಂದು ಉದಾಹರಣೆ. ಇದು ವಿವಿಧ ರೀತಿಯ ಔಷಧೀಯ ಸಸ್ಯಗಳ ಆಗರವಾಗಿವೆ.

ಅತಿಯಾದ ಹಸಿರು ದಟ್ಟಣೆಯಿರದ ಕಾರಣ ಪಶ್ಚಿಮ ಘಟ್ಟಕ್ಕೆ ಹೋಲಿಸಿದಲ್ಲಿ ಪ್ರಾಣಿ ಪ್ರಭೇದ ಕೊಂಚ ಕಡಿಮೆ. ನಾಗರಹಾವು, ಓತಿಕ್ಯಾತ, ಹಾವುರಾಣಿ, ಉಡ, ಚೇಳು ಇಲ್ಲಿನ ಪ್ರಮುಖ ಸರೀಸೃಪಗಳು. ಹೆಬ್ಬಕ್ಕ (great Indian bustrud), ಬೆಳ್ಳಕ್ಕಿ (egrets), ಟಿಟ್ಟಿಬ, ಮಿಂಚುಳ್ಳಿ, ಗೂಬೆ ಇಲ್ಲಿನ ಸಾಮಾನ್ಯ ಪಕ್ಷಿಗಳು. ತೋಳ, ಭಾರತೀಯ ನರಿ, ಕಾಡು ಬೆಕ್ಕು, ಮುಂಗುಸಿಗಳನ್ನು ಸಾಮಾನ್ಯವಾಗಿ ಕಾಣಬಹುದು.


© ನಾಗೇಶ್ ಒ. ಎಸ್.


© ನಾಗೇಶ್ ಒ. ಎಸ್.

ಇವುಗಳನ್ನು ಹೊರತುಪಡಿಸಿ ವಿಶೇಷವಾಗಿ ಕಾಣಸಿಗುವ ಕೃಷ್ಣಮೃಗ (black buck), ಕರಡಿ (sloth bear), ಚಿಂಕಾರಗಳನ್ನೂ ಕಾಣಬಹುದು. ಇವುಗಳ ರಕ್ಷಣೆಗಾಗಿ ಅರಣ್ಯ ಇಲಾಖೆ ರಾಣಿಬೆನ್ನೂರಿನಲ್ಲಿ ಕೃಷ್ಣಮೃಗ ಅಭಯಾರಣ್ಯ, ದಾರೋಜಿಯಲ್ಲಿ ಕರಡಿ ಅಭಯಾರಣ್ಯ, ತುಂಗಭದ್ರೆಯ ಮಡಿಲಲ್ಲಿ ನೀರುನಾಯಿ ಸಂರಕ್ಷಣಾ ಮೀಸಲು, ಬಂಕಾಪುರದಲ್ಲಿ ನವಿಲು ಕಾಪುಗಾಡು, ಯಡಹಳ್ಳಿಯ ಚಿಂಕಾರ ಅಭಯಾರಣ್ಯ, ಅದಲ್ಲದೆ ಅನೇಕ ವಲಸೆ ಪಕ್ಷಿಗಳಿಗೆ ಮಾತೃ ಮಡಿಲಾಗಿರುವ ಮಾಗಡಿ ಕೆರೆ (ಪಟ್ಟೆತಲೆ ಹೆಬ್ಬಾತು) ಸಂರಕ್ಷಣಾ ಮೀಸಲು, ಅತ್ತಿವೇರಿ ಪಕ್ಷಿಧಾಮ, ಅಂಕಸಮುದ್ರ ಪಕ್ಷಿಧಾಮ, ಕೃಷ್ಣಾ ನದಿಯ ದಡದ ಘಟಪ್ರಭಾ ಪಕ್ಷಿಧಾಮ ಅನೇಕ ಪ್ರಾಣಿ, ಪಕ್ಷಿಗಳಿಗೆ ಆಶ್ರಯ ನೀಡಿ ಈ ಕಾಡುಗಳ ಶ್ರೇಯ ಹೆಚ್ಚಿಸಿವೆ.

ಜಾನುವಾರುಗಳನ್ನು ಅತಿಯಾಗಿ ಮೇಯಿಸುವುದು, ಗಣಿಗಾರಿಕೆ, ಭೂ ಒತ್ತುವರಿ, ನಿರ್ಲಕ್ಷ್ಯತನದಿಂದ ಗುಡ್ಡಗಳೇ ಕುಸಿಯುತ್ತಿವೆ. ಅಮೂಲ್ಯವಾದ ಮಣ್ಣು ಹಾಗು ಹಸಿರಿನ ಹೊದಿಕೆ ಕಾಂಕ್ರಿಟೀಕರಣಗೊಳ್ಳುತ್ತಿದೆ. ದೊಡ್ಡ ದೊಡ್ಡ ಬಂಡೆಗಳು ಕಟ್ಟಡಗಳಾಗುತ್ತಿವೆ. ಕುಸಿಯುತ್ತಿರುವ ಮರಗಳ ಸಂಖ್ಯೆ ಈ ಪ್ರದೇಶವನ್ನು ಉಷ್ಣಗೊಳಿಸುತ್ತಿದೆ. ಸರಿಯಾದ ನೆಲೆಸಿಗದೆ, ಆಹಾರ ಕೊರತೆಯಿಂದ, ರಸ್ತೆ ಅಪಘಾತದಿಂದ ಪ್ರಾಣಿಗಳ ಸಂಖ್ಯೆ ಕುಸಿಯುತ್ತಿದೆ. ಈ ಕಾಡುಗಳಿಗೂ ಜೀವ ಇದೆ, ಇವುಗಳಲ್ಲಿಯೂ ಅನೇಕ ಜೀವಿಗಳು ನೆಲೆಯೂರಿವೆ. ಇವುಗಳ ರಕ್ಷಣೆಗೂ ಧ್ವನಿಗೂಡಿಸಬೇಕಿದೆ.




**ಲೇಖನ: ಪ್ರಜ್ವಲ್ ಸಿಂಧೂರ್**

ಬಾಗಲಕೋಟೆ ಜಿಲ್ಲೆ




# ಕಣಜಗಳ ಅದ್ಭುತ ಲೋಕ

ಇತ್ತೀಚೆಗೆ ಒಂದು ಬೆಳಿಗ್ಗ ಮನೆಯಾಕೆ "ಮಾವಿನ ಗಿಡದಾಗ ಹೂ ಬಿಟ್ಟೈತಿ ನೋಡೀರೇನು " ಎಂದು ಕೇಳಿದಳು. "ನಿನ್ನೇನ ನೋಡೀನಿ" ಅಂದು ಮತ್ತೊಮ್ಮೆ ಕಣ್ತುಂಬಿಕೊಳ್ಳಲು ಮನೆಯ ಮಾಳಿಗೆಯ ಮೇಲೆ ಹೋದೆ. ಮಾಳಿಗೆಯಲ್ಲಿ ಸೋಲಾರ್ ನೀರಿನ ಟ್ಯಾಂಕ್ ನ್ನು ಅಳವಡಿಸಲಾಗಿದೆ. ಆಕಸ್ಮಾತ್ ಆಗಿ ಟ್ಯಾಂಕಿನ ಕೆಳಭಾಗದಲ್ಲಿ ಏನೋ ಅಂಟಿಕೊಂಡಿರುವುದು ಕಾಣಿಸಿತು. ಕುತೂಹಲದಿಂದ ಕೆಳಗೆ ಬಗ್ಗಿ ನೋಡಿದರೆ ಅದೊಂದು ಕಣಜಗಳ ಗೂಡು. ಅರೆರೆರೆರೆರೆ... ಎಂದುಕೊಂಡು ಸೂಕ್ಷ್ಮವಾಗಿ ನೋಡಿದರೆ ಅದೊಂದು ಸುಂದರವಾದ ಗೂಡು.

ಬೇಗನೇ ಕೆಳಗೆ ಹೋಗಿ ಕ್ಯಾಮೆರಾ ತೆಗೆದುಕೊಂಡು ಹೋಗಬೇಕೆಂದುಕೊಂಡವನಿಗೆ ಕ್ಯಾಮೆರಾದಿಂದ ಸಮೀಪ ಸ್ಪಷ್ಟ ಚಿತ್ರಗಳು ಸಿಗಲಾರವು ಎಂದುಕೊಂಡು ನನ್ನ ಮೊಬೈಲ್ ತೆಗೆದುಕೊಂಡು ಹೋದೆ. ಪೂರ್ತಿಯಾಗಿ ಟ್ಯಾಂಕ್ ನ ಕೆಳಗೆ ಕುಳಿತುಕೊಂಡೆ. ಯಾಕೆಂದರೆ ಕೆಳಗೆ ಕುಳಿತುಕೊಳ್ಳಲಾರದೆ ಚಿತ್ರಗಳನ್ನು ಕ್ಲಿಕ್ ಮಾಡುವುದು ಅಸಾಧ್ಯವಾಗಿತ್ತು. ಚಕ್ಕಳಬಕ್ಕಳ ಹಾಕಿದವನೇ ಮೊಬೈಲ್ ನಿಂದ ಕ್ಲಿಕ್ ಮಾಡತೊಡಗಿದೆ. ನನ್ನ ಕೈಬಳಿಯೇ ಕಣಜಗಳು ಹಾರಾಡುತ್ತಿದ್ದವು. ಅವುಗಳಿಗೆ ತೊಂದರೆ ಮಾಡದೇ ಅವುಗಳೇನು ಮಾಡಲಾರವು ಎಂದು ನನಗೆ ಗೊತ್ತಿತ್ತು. ಕಣಜಗಳ ಮುಳ್ಳಿನ ಕುಟುಕುವಿಕೆಯೂ ಅಪಾಯಕಾರಿಯೆ. ಆದರೂ ಸಮೀಪದಿಂದಲೇ ಕ್ಲಿಕ್ಕಿಸತೊಡಗಿದೆ.



ಅದೊಂದು ದೊಡ್ಡ ಲೋಕವೇ ಸರಿ. ಬೆಳ್ಳನೆಯ ಪುಟ್ಟ ಷಟ್ಕೋನಾಕೃತಿಯ ಗೂಡುಗಳಲ್ಲಿ ಮೊಟ್ಟೆಗಳು, ಮರಿಗಳಿದ್ದವು. ಅವುಗಳಲ್ಲಿ ಕೆಲವಕ್ಕೆ ಮುಚ್ಚಳಗಳಿದ್ದರೆ, ಕೆಲವಕ್ಕೆ ಇರಲಿಲ್ಲ. ಮರಿಗಳಾಗಿದ್ದವುಗಳನ್ನು ಕಣಜಗಳು ಹೊರತಂದು, ಹೊರಪ್ರಪಂಚವನ್ನು ಪರಿಚಯಿಸುತ್ತಿದ್ದವು. ಕೆಲವು ಕಣಜಗಳು ಗೂಡಿನಲ್ಲಿರುವ ಮೊಟ್ಟೆ ಮರಿಗಳಿಗೆ ಸಮವಾದ ಉಷ್ಣತೆ ದೊರೆಯುವಂತೆ ತಮ್ಮ ರೆಕ್ಕೆಗಳಿಂದ ಗಾಳಿ ಬೀಸುತ್ತಿದ್ದವು. ಕೆಲವು ಒಳಗೆ ಹೋಗಿ ಮೊಟ್ಟೆ, ಮರಿಗಳ ಸುರಕ್ಷತೆಯನ್ನು ಗಮನಿಸುತ್ತಿದ್ದವು. ಎರಡು ಕಣಜಗಳು ಅಕ್ಷರಶಃ ಮೊಟ್ಟೆಯೊಂದನ್ನು ಬಾಯಲ್ಲಿ ಕಚ್ಚಿ ಎಲ್ಲಿಗೋ ಸಾಗಿಸುತ್ತಿದ್ದವು. ಎರಡು ಕಣಜಗಳು ಗೂಡಿನ ಮೇಲ್ಭಾಗದಲ್ಲಿಯೇ ಕುಳಿತು ಇಡೀ ಗೂಡನ್ನು ಅವಲೋಕಿಸುತ್ತಿದ್ದವು. ನಾನು ಎಲ್ಲವನ್ನೂ ಕ್ಲಿಕ್ ಮಾಡುತ್ತಲೇ ಇದ್ದೆ.





ಅಷ್ಟರಲ್ಲಿ ನಿಧಾನವಾಗಿ ಮೊಬೈಲ್ ನ್ನು ತಿರುಗಿಸಿ ಗಮನಿಸಿದೆ. ಎರಡು ಕಣಜಗಳ ತಲೆಗಳ ದೊಡ್ಡ ಕಣ್ಣುಗಳು ನನ್ನನ್ನೇ ದಿಟ್ಟಿಸಿ ನೋಡುತ್ತಿರುವುದನ್ನು ನೋಡಿ ಗಾಬರಿಗೊಂಡೆ. ಅವು ನನ್ನತ್ತಲೇ ತಲೆ ತಿರುಗಿಸಿ ನೋಡುತ್ತಿದ್ದವು. ಮೆಲ್ಲನೆ ಆಚೀಚೆ ನೋಡಿ ಕ್ಲಿಕ್ ಮಾಡಿದೆ. ಅವುಗಳೇನೂ ತೊಂದರೆ ಕೊಡಲಿಲ್ಲ. ಯಾಕೆಂದರೆ ನಾನು ಅವುಗಳಿಗೆ ತೊಂದರೆಯಾಗಲಾರದಂತೆಯೇ ಕ್ಲಿಕ್ಕಿಸುತ್ತಿದ್ದೆ.

ಕಣಜಗಳು ಕೀಟ ಜಾತಿಗಳಲ್ಲಿಯೇ ವಿಶೇಷವಾದವುಗಳು. ದೊಡ್ಡ ತಲೆ, ದೊಡ್ಡ ಕಣ್ಣು, ತೆಳ್ಳನೆಯ ಸೊಂಟದ ಸ್ವಲ್ಪ ಹಿಂದಿರುವ ಹೊಟ್ಟೆಯ ದುಂಡನೆಯ ಭಾಗದಿಂದ ಕಣಜಗಳನ್ನು ಸುಲಭವಾಗಿ ಗುರುತಿಸಬಹುದು. ಬಹುತೇಕ ಕಣಜಗಳ ಪ್ರಭೇದಗಳು ಏಷ್ಯಾದ ಉಷ್ಣವಲಯಗಳಲ್ಲಿ ಕಾಣಿಸುತ್ತವೆ. ಆದರೆ ಯೂರೋಪಿಯನ್ ಕಣಜವು ಯೂರೋಪ್, ರಷ್ಯಾ, ಉತ್ತರ ಅಮೇರಿಕಾ ಮತ್ತು ಈಶಾನ್ಯ ಏಷ್ಯಾದಾದ್ಯಂತ ವ್ಯಾಪಕವಾಗಿ ಹರಡಿದೆ.

ಇತರ ಸಂಘಜೀವಿ ಕೀಟಗಳಂತೆ, ಕಣಜಗಳು ಕಾಗದದಂಥ ಮೆದು ಪದಾರ್ಥವನ್ನು ಮಾಡಲು ಕಟ್ಟಿಗೆಯನ್ನು ಅಗಿದು ಗೂಡುಗಳನ್ನು ಕಟ್ಟುತ್ತವೆ. ಪ್ರತಿ ಗೂಡು ಒಂದು ರಾಣಿಕಣಜವನ್ನು ಹೊಂದಿರುತ್ತದೆ. ರಾಣಿಕಣಜವು ಮೊಟ್ಟೆಗಳನ್ನು ಇಡುತ್ತದೆ ಮತ್ತು ಇದನ್ನು ಕೆಲಸಗಾರ್ತಿ ಕಣಜಗಳು ಶುಶ್ರೂಷೆ ಮಾಡುತ್ತವೆ. ಕೆಲಸಗಾರ್ತಿ ಕಣಜಗಳು

ಆನುವಂಶಿಕವಾಗಿ ಹೆಣ್ಣಾದರೂ ಫಲವತ್ತಾದ ಮೊಟ್ಟೆಗಳನ್ನು ಇಡಲಾರವು. ಬಹುತೇಕ ಪ್ರಜಾತಿಗಳು ಮರಗಳು ಮತ್ತು ಪೊದೆಗಳಲ್ಲಿ ಕಾಣುವಂಥ ಗೂಡುಗಳನ್ನು ಕಟ್ಟುತ್ತವೆ, ಆದರೆ ಕೆಲವು ತಮ್ಮ ಗೂಡುಗಳನ್ನು ನೆಲದ ಕೆಳಗೆ ಅಥವಾ ಇತರ ಕುಳಿಗಳಲ್ಲಿ ಕಟ್ಟುತ್ತವೆ. ಕೆಲವು ಕಣಜಗಳು ಮಡಕೆಯಾಕಾರದಲ್ಲಿ ಮಣ್ಣಿನಿಂದ ಗೂಡನ್ನು ಕಟ್ಟುತ್ತವೆ.

ಮುಖ್ಯವಾಗಿ ಬೆಳೆಗಳಿಗೆ ಹಾನಿಯನ್ನುಂಟುಮಾಡುವ ಕೀಟಗಳನ್ನು ಈ ಕಣಜಗಳು ಭಕ್ಷಿಸುವುದರಿಂದಾಗಿ ಇವು ರೈತನ ಮಿತ್ರವೂ ಆಗಿವೆ. ಇವುಗಳು ವಿಶೇಷವಾದ ರಾಸಾಯನಿಕ ದ್ರವವನ್ನು ಸ್ರವಿಸುವುದರಿಂದ ಪಕ್ಷಿಗಳಾಗಲಿ, ಇತರೆ ಜೀವಿಗಳಾಗಲಿ ಇವುಗಳನ್ನು ತಿನ್ನುವುದು ವಿರಳ.

ಒಟ್ಟಾರೆ ಒಂದು ಕೀಟದ ಅದ್ಭುತ ಲೋಕವನ್ನು ಸಮೀಪದಿಂದ ಕಣ್ಣಾರೆ ನೋಡುವ ಅವಕಾಶ ಇವತ್ತು ಒದಗಿಬಂದದ್ದು ನನ್ನ ಭಾಗ್ಯವೇ ಸರಿ ಎಂದು ನಾನು ಅಲ್ಲಿಂದ ಹೊರಬಂದೆ.












**ಚಿತ್ರ - ಲೇಖನ: ಸಿದ್ಧರಾಮ ಕೂಡ್ಲಿಗಿ**

ವಿಜಯನಗರ ಜಿಲ್ಲೆ




ವಿವಿ ಅಂಕಣ

# AC ಯಲ್ಲಿ ಅರಳಿದ ಹೂ...

‘ವಾರ ಬಂತಮ್ಮ... ಗುರುವಾರ ಬಂತಮ್ಮ. ರಾಯರ ನೆನೆಯಮ್ಮ... ಗುರು ರಾಯರ ನೆನೆಯಮ್ಮ...’ ಹಾಡನ್ನು ಕೇಳಿರುತ್ತೀರಿ. ಬಹುಶಃ ನೀವು ಈಗ ಈ ಲೇಖನ ಓದುತ್ತಿರುವ ದಿನವೇ ಗುರುವಾರ ಆಗಿರಬಹುದು. ಅಥವಾ ರಾಯರ ಭಕ್ತರಾಗಿದ್ದರೆ ಗುರುವಾರ ನಿಮ್ಮ ವಾರದ ಮುಖ್ಯ ಹಾಗೂ ಇಷ್ಟದ ದಿನವಾಗಿರಬಹುದು. ಆದರೆ ನನಗೆ ಗುರುವಾರವೆಂದರೆ ಇಷ್ಟ-ಕಷ್ಟಗಳ ಸಮ್ಮಿಶ್ರಣ, ಅದರಲ್ಲೂ ಹೀಗೆ ಬಿಸಿ ಬಿಸಿ ಕಜ್ಜಾಯದಂತೆ ಬುಸುಗುಟ್ಟುವ ಬಿಸಿಲಿನ ಬೇಗೆ ಇರುವ ಫೆಬ್ರುವರಿ-ಮಾರ್ಚ್ ತಿಂಗಳುಗಳಾದರೆ ಸ್ವಲ್ಪ ಇಷ್ಟ-ಬೇಜಾನ್ ಕಷ್ಟದ ಮಿಶ್ರಣ. ಏಕೆ ಎಂದಿರಾ? ನಾನು ಕೆಲಸ ಮಾಡುವ “ಮಾಡೂ” ಪ್ರಾಜೆಕ್ಟ್ ನಲ್ಲಿ ವಾರಕ್ಕೆ ಕನಕಪುರದ ಆಯ್ದ ಹತ್ತು ಸರ್ಕಾರಿ ಶಾಲೆಗಳಿಗೆ ಹೋಗುತ್ತೇವೆ. ಗುರುವಾರದಂದು ತಮಿಳುನಾಡಿಗೆ ಸಮೀಪದ ಹುಣಸನಹಳ್ಳಿಯ ಬಳಿ ಇರುವ ಆಲನಾಥ-ಬನ್ನಿಮುಕ್ಕೋಡ್ಲು ಎಂಬ ಹಳ್ಳಿಗಳ ಶಾಲೆಗಳಿಗೆ ನಮ್ಮ ಭೇಟಿ. ಕನಕಪುರ-ಕೋಡಿಹಳ್ಳಿ ಯಿಂದ ಆಚೆ ಹೋದಂತೆಲ್ಲಾ ನಮ್ಮ ಬೆಂಗಳೂರಿನ ವಾತಾವರಣ ಕ್ರಮೇಣ ತಮಿಳುನಾಡಿನ ಬಿಸಿಲಿಗೆ ಬದಲಾಗುತ್ತಾ ಹೋಗುತ್ತದೆ. ಆಶ್ರಮದಲ್ಲಿ ಮರಗಳ ನಡುವಿನ ತಂಪಾದ ವಾತಾವರಣದಿಂದ ಅಲ್ಲಿಗೆ ಹೋಗುತ್ತಿದ್ದಂತೆ, ಯಾರೋ ಚಾಲೂ ಇದ್ದ AC ಯನ್ನು ಕ್ರಮೇಣ ಕಡಿಮೆ ಮಾಡಿ ಬಂದ್ ಮಾಡುವುದಲ್ಲದೇ ಬೆಂಕಿಯನ್ನೂ ಹಚ್ಚಿದಂತೆ ವಾತಾವರಣ ಬದಲಾಗುತ್ತಾ ಹೋಗುತ್ತದೆ. ಅಷ್ಟು ಸಾಲದು ಎಂಬಂತೆ ಆಲನಾಥ ಶಾಲೆಯ ಕಟ್ಟಡ 200-250ಮೀ ಎತ್ತರದ ಒಂದು ಸಣ್ಣ ಗುಡ್ಡದ ಮೇಲಿದೆ. ಅಷ್ಟು ಸಾಕು! ಕೆಲವೊಮ್ಮೆ ರಸ್ತೆಯಿಂದ ನಡೆದು ಹೋಗುವಾಗ ಆ ಬಿಸಿಲಿಗೆ ಕಾಲುಗಳು ಹೇಳಿದ ಮಾತೇ ಕೇಳುವುದಿಲ್ಲ. ಕಣ್ಣುಗಳು ನೆರಳಿರುವ ಮರಗಳ ಹುಡುಕುವಿಕೆಯಲ್ಲಿ ತಲ್ಲೀನವಾದವು. ಇದು ಸಾಲದೆಂಬಂತೆ ಆ ಹಾದಿಯಲ್ಲಿ ನೆರಳಿಡುವ ಒಂದು ಮರವೂ ಹತ್ತಿರದಲ್ಲಿಲ್ಲ. ಕೇವಲ ಆ 200 ಮೀಟರ್ ಏರುವ ನಡಿಗೆಯೇ

ಸಾಕು. ದೇಹದ ಉಷ್ಣ ಏರಿ ಅದನ್ನು ತಂಪಾಗಿಸಲು ಬರುವ ಬೆವರು ಆವರಿಸಿ ಸುರಿಯುತ್ತಿರುತ್ತದೆ. ಕೊನೆ ಕೊನೆಗೆ ಸಿಗುವ ಹೊಂಗೆ ಮರದ ಸ್ವಲ್ಪ ನೆರಳು ಆಕರ್ಷಿಸಿದರೂ ಇನ್ನೇನು ಶಾಲೆ ಬಂತಲ್ಲಾ ಎಂದು ಮುಂದೆ ಸಾಗಿಬಿಡುವುದು ವಾಡಿಕೆ. ಇದಕ್ಕಿಂತ ಹೆಚ್ಚಾಗಿ ವಾರಕ್ಕೊಮ್ಮೆ ಬರುವ ನಮ್ಮ "ಮಾಡೂ ತರಗತಿಗಾಗಿ" ಕಾಯುತ್ತಿರುವ ಮಕ್ಕಳ ಮುಖಗಳ ಮಂದಹಾಸದ ಆಹ್ವಾನ AC ಗಾಳಿಯಂತೆ ಬೀಸಿ ಜೀವ ತಣ್ಣಗಾಗಿಸುತ್ತದೆ.




ಹಾಗಾದರೆ ಪಾಪ ಯಾವಾಗಲೂ ಬಿಸಿಲಿನಲ್ಲೇ ಇರುವ ಮರ-ಗಿಡಗಳ ಗತಿಯೇನು? ಅವುಗಳ AC ಏನು? ನಿಮಗೆ ತಿಳಿದಿರುವ ಹಾಗೆ ಬೇಸಿಗೆಯ ಸಮಯದಲ್ಲಿ ನಮ್ಮ ಸುತ್ತ ಮುತ್ತಲ ಕಾಡಿನ ಮರಗಳು ಒಣಗಿರುತ್ತವೆ. ಹಸಿರಾಗಿರುವ ಕೆಲವು ಮರಗಳು, ನಾವು ಬೆವರಿ ನಮ್ಮ ದೇಹದ ಉಷ್ಣಾಂಶ ತಗ್ಗಿಸುವಂತೆ ಆ ಮರಗಿಡಗಳೂ ಸಹ ಬಾಷ್ಪ ವಿಸರ್ಜನೆಯ ಮೂಲಕ ನೀರಿನ ಅಂಶವನ್ನು ಹೊರ ಹಾಕಿ ತಮ್ಮ ಸುತ್ತಲಿನ ಪ್ರದೇಶ ಹಾಗೂ ಎಲೆ-ಹೂಗಳನ್ನು ತಂಪಾಗಿರಿಸುತ್ತವೆ. ಹೌದು, ನೀವು ಕೇಳುತ್ತಿರುವುದು ಸತ್ಯ. ಹೂಗಳೂ ಸಹ ಆ ಕಾಲದಲ್ಲಿದ್ದರೆ ತಂಪಾಗಿರುತ್ತವೆ. ಬಹುಶಃ ಬಿಸಿಲಿಗೆ ಬೆಂದು ಉಸ್ಸಪ್ಪಾ... ಎಂದು ಕೂತು ವಿಶ್ರಮಿಸುವ ಯೋಚನೆಯಲ್ಲಿರುವ ನಮಗೆ ಇದನ್ನೆಲ್ಲಾ ಪರೀಕ್ಷಿಸಬೇಕೆಂಬ ಕುತೂಹಲ ಇರುವುದಿಲ್ಲ. ಆದರೆ ದಕ್ಷಿಣ ಭಾಗದ ಸ್ಪೇನ್ ನಲ್ಲಿರುವ ಒಬ್ಬ ಸಂಶೋಧಕನಿಗೆ ಅಲ್ಲಿರುವ ಬೆಟ್ಟದ ಸಸ್ಯಗಳನ್ನು ತನ್ನ ಸಂಶೋಧನೆಯ ಸಲುವಾಗಿ ಗಮನಿಸಲು ಹೋದಾಗ ಅಕಸ್ಮಾತಾಗಿ ಅಲ್ಲಿ ಬೇಸಿಗೆಯಲ್ಲಿ ಬೇರೆಲ್ಲ ಗಿಡ ಮರಗಳು ಒಣಗಿರುವ ಆ ಸಮಯದಲ್ಲಿ ಅರಳಿ ಸೊಗಸಾಗಿ ಹಳದಿ ಹೂ ಬಿಡುವ ಥಿಸಲ್ ಗಿಡದ ಹೂವನ್ನು (thistle flower) ಮುಟ್ಟುತ್ತಾನೆ. ಮುಟ್ಟಿದ ತಕ್ಷಣ ಅವನಿಗೆ ಅರಿವಾಗುತ್ತದೆ ಇದರಲ್ಲೇನೋ ವಿಶೇಷವಿದೆ ಎಂದು. ಏಕೆಂದರೆ ಮುಟ್ಟಿದ ತಕ್ಷಣ ಹೂವಿನ ಮೇಲಿನ ಉಷ್ಣಾಂಶ ಕಡಿಮೆ ಇರುತ್ತದೆ. 'ಅರೇ ಆದರಲ್ಲೇನಿದೆ ವಿಶೇಷ? ಈ ಮೇಲೆ ನೀವೇ ಹೇಳಿದ ಹಾಗೆ ಮರಗಿಡಗಳ ಹೂಗಳೂ ಸಹ ಅಂತಹ ಬಿಸಿಲಿನಲ್ಲಿ ಬಾಷ್ಪ ವಿಸರ್ಜನೆಯ ಕ್ರಿಯೆಯಿಂದ ತಂಪಾಗಿರುತ್ತವಲ್ಲಾ' ಹೌದು ನಿಜ, ಆದರೆ ಇಲ್ಲಿನ ವಿಚಾರವೇ ಬೇರೆ. ಸಾಮಾನ್ಯವಾಗಿ ಹೀಗೆ ಮರಗಿಡಗಳು




ತಂಪಾಗಿರುತ್ತವಾದರೂ ಅವುಗಳ ಉಷ್ಣಾಂಶ ಸುತ್ತಲಿನ ಗಾಳಿಯ ಉಷ್ಣಾಂಶಕ್ಕಿಂತ ಕಡಿಮೆ ಇರುವುದಿಲ್ಲ. ಆದರೆ ಈ ಹೂವನ್ನು ಮುಟ್ಟಿದಾಗಲೇ ಅವನಿಗೆ ತಿಳಿಯಿತು ಇದು ವಾತಾವರಣದ ಗಾಳಿಯ ಉಷ್ಣಕ್ಕಿಂತ ಹೆಚ್ಚು ಕಡಿಮೆಯಿದೆ ಎಂದು. ಒಂದು ರೀತಿಯಲ್ಲಿ ತನ್ನೊಳಗೆ AC ಯನ್ನು ಇಟ್ಟುಕೊಂಡಿರುವ ಹಾಗಿದೆ.

ಹಾಗಾದರೆ ಎಷ್ಟು ಡಿಗ್ರಿ ಕಡಿಮೆ ಇತ್ತು? ಎಂಬ ಪ್ರಶ್ನೆಗೆ ಇಲ್ಲಿ ಉತ್ತರವಿಲ್ಲ ಎಂದು ಹೇಳುವುದಿಲ್ಲ. ಲೇಖನದ ಮುಖ್ಯ ಭಾಗವೇ ಅದಲ್ಲವೇ? ಹೇಳುತ್ತೇನೆ, ತನ್ನಲ್ಲಿದ್ದ ಎಲೆಕ್ಟ್ರಾನಿಕ್ ಉಷ್ಣ ಮಾಪಕದ ಸಹಾಯದಿಂದ ಸುಮಾರು 2-3 ಬೇರೆ ಬೇರೆ ಭಾಗಗಳಲ್ಲಿ ಆ ಹೂವಿನ ಉಷ್ಣ ಅಳೆದಾಗ ತಿಳಿದದ್ದು, ಹೂವಿನ ಉಷ್ಣ ಸುತ್ತಲಿನ ಗಾಳಿಯ ಉಷ್ಣಕ್ಕಿಂತ ಸರಾಸರಿ 3 ಡಿಗ್ರಿ ಸೆಲ್ಸಿಯಸ್ ಕಡಿಮೆ ಇತ್ತು ಎಂದು. ಸ್ವಾಭಾವಿಕವಾಗಿ ಒಂದು ಹೂ ಅಂತಹ ಬಿಸಿಲಿನಲ್ಲಿ ಇಷ್ಟು ತಂಪಾಗಿರುವುದು ವಿಶೇಷವೇ. ಇಷ್ಟೇ ಎಂದುಕೊಂಡಿರಿ, ಇನ್ನೂ ಇದೆ. ದಿನಕರ ಜರುಗಿದಂತೆ, ಬಿಸಿಲೇರುತ್ತಾ ಹೋದಂತೆ, ಬಿಸಿ ಹೆಚ್ಚಾದಂತೆ ಹೂವಿನ ಉಷ್ಣಾಂಶ ಕಡಿಮೆಯಾಗುತ್ತಾ ಹೋಯಿತಂತೆ. ಎಷ್ಟೆಂದರೆ, ಸುಮಾರು 10 ಡಿಗ್ರಿ ಸೆಲ್ಸಿಯಸ್ ತನಕ ಕಡಿಮೆ ಇತ್ತಂತೆ. ಅಂದರೆ ವಾತಾವರಣದ ಉಷ್ಣತೆ 45 ಡಿಗ್ರಿ ಇದ್ದರೆ, ಹೂವಿನ ಉಷ್ಣತೆ ಕೇವಲ 35 ಡಿಗ್ರಿ ಸೆಲ್ಸಿಯಸ್. ತನ್ನ ಸುತ್ತಲಿನ ಗಾಳಿಯ ಉಷ್ಣಾಂಶಕ್ಕೆ ಹೋಲಿಸಿದರೆ ಇಷ್ಟು ವ್ಯತ್ಯಾಸ ಇರುವುದು ಅಚ್ಚರಿಯೇ! ಒಂದು ರೀತಿಯಲ್ಲಿ, ತನ್ನಲ್ಲಿ ಒಂದು ಸ್ವಾಭಾವಿಕ AC ಯನ್ನೇ ಇರಿಸಿಕೊಂಡು ತಂಪಾದಂತೆ.




ಸಾಮಾನ್ಯವಾಗಿ ಒಂದು ಗಿಡ ಅಥವಾ ಮರದ ಎಲೆಗಳು ಹೀಗೆ ಬಿಸಿಲಿನಲ್ಲಿ ತಂಪಾಗಿರುತ್ತವೆ. ಆದರೆ ಇಲ್ಲಿ ಹೂಗಳೇ ತನ್ನ ಆ ಗಿಡದ ಎಲೆಗಳಿಗಿಂದ ತಂಪಾಗಿರುವುದು ವಿಶೇಷ. ಒಂದು ವಿಧವಾಗಿ ಸಂಶೋಧಕನ ಹಾಗೆ ಯೋಚಿಸಿದರೆ ಆ ಬಿಸಿಲಿನಲ್ಲಿ ಹೀಗೆ ಹೂ ತಂಪಾಗಿರುವುದರಿಂದ ಪರಾಗಸ್ಪರ್ಶಕಗಳನ್ನು ಆಕರ್ಷಿಸಲು ಇದೊಂದು ಗಿಡದ ಬುದ್ಧಿವಂತ ಹೆಜ್ಜೆಯಾಗಿರಬಹುದು. ಆದರೆ 'ಇದಕ್ಕೆ ನಿಖರ ವೈಜ್ಞಾನಿಕ ಕಾರಣವೇನೆಂದು ಈ ವಿಷಯದ ಬಗ್ಗೆ ಹೆಚ್ಚಾಗಿ ಸಂಶೋಧನೆ ಇಲ್ಲದೇ ಇರುವುದರಿಂದ ತಿಳಿದಿಲ್ಲ. ಈಗ ಆ ಸಮಯ ಬಂದಿದೆ. ಹೂಗಳ ಈ ನಡವಳಿಕೆಗಳಿಗೆ ವೈಜ್ಞಾನಿಕ ಕಾರಣ ಹುಡುಕಬೇಕಿದೆ.' ಎನ್ನುವ ಸಂಶೋಧಕನ ಮಾತು ಒಪ್ಪುವಂಥದ್ದು.

1983ರಲ್ಲಿ ಬಂದ ಕನ್ನಡ ಚಲನಚಿತ್ರ 'ಬೆಂಕಿಯಲ್ಲಿ ಅರಳಿದ ಹೂ' ನಂತೆ ತನ್ನ ಸ್ವಂತ ಸ್ವಾಭಾವಿಕ 'AC ಯಲ್ಲಿ ಅರಳಿದ ಹೂ' ವನ್ನು ನಾವಿಲ್ಲಿ ನೋಡಬಹುದು. ಆದರೆ ಈ ಎರಡು ಹೇಳುವಂತೆ ತನ್ನ ಸುತ್ತ ಸುತ್ತಿರುವ ಕಠಿಣ-ಕಷ್ಟದ ವಾತಾವರಣವನ್ನೂ ಮೀರಿ ಅರಳುವ ಛಲ ನಮ್ಮಲ್ಲಿ ಇರಬೇಕೆಂಬ ಸಂದೇಶ ನಾವು ಅರಿಯಬೇಕಿದೆ...

**Source:** www.snexplores.org



**ಲೇಖನ: ಜೈಕುಮಾರ್ ಆರ್.**

**ಡಬ್ಲ್ಯೂ. ಸಿ. ಜಿ. ಬೆಂಗಳೂರು ನಗರ ಜಿಲ್ಲೆ**

# ಮರುಗಿ ಜೀವಬಿಟ್ಟ ಮರ ನಾನು

ಸಾವಿರಾರು ವರುಷಗಳಿಂದ ಬೆಳೆದಿದ್ದೆ
ಹಚ್ಚ ಹಸಿರಿನಿಂದ ತುಂಬಿದ್ದೆ
ಸ್ವಚ್ಛ ಗಾಳಿ ನೀಡುತ್ತಿದ್ದೆ
ಜೀವಸಂಕುಲಕ್ಕೆ ಆಶ್ರಯವಾಗಿದ್ದೆ

ನನ್ನೊಡಲಿಗೆ ಬುಲ್ಡೋಜರ್ ಹಚ್ಯಾರ
ರುಂಡ-ಮುಂಡ ಕತ್ತರಿಸ್ಯಾರ
ಹಸುರು ಕಡೆದು ಉಸಿರು ನಿಲ್ಲಿಸಿ
ರಾತ್ರೋರಾತ್ರಿ ಮಾರಣಹೋಮ ಮಾಡ್ಯಾರ

ಪ್ರಾಣಿ ಪಕ್ಷಿಗಳ ಕಾಪಕ್ಕಲ ಕಂಗೆಡಿಸ್ಯಾರ
ಮ್ಯಾಲ ಅಭಿವೃದ್ಧಿಯ ಹೆಸರು ಕಟ್ಯಾರ
ಮನುಷ್ಯರಲ್ರಪ್ಪೋ! ಇವರು
ತಾಯಿ ಕೊಂದು ಮಕ್ಕಳ ಅನಾಥ ಮಾಡಿದ ಹಂತಕರು

ಮಾತು ಬರಲ್ರಪ್ಪೋ!...... ನನಗ
ಮೌನವಾಗಿ ಆಮ್ಲಜನಕ ನೀಡುವ ಮೂಕಿ ನಾನು
ನಿಮ್ಮೆಲ್ಲರ ಜೀವನ ರಕ್ಷಿಸುವ ವೃಕ್ಷ ನಾನು
ಬುಲ್ಡೋಜರ್ ಹೊಡೆತಕ್ಕ ಮರುಗಿ ಜೀವಬಿಟ್ಟ ಮರ ನಾನು.

- ರಾಮಲಿಂಗ ಮಾಡಗಿರಿ
ರಾಯಚೂರು ಜಿಲ್ಲೆ

© ಡಾ. ಅಶ್ವಥ ಕೆ. ಎನ್

# ಪ್ರಕೃತಿ ಬಿಂಬ



**ಹಳದಿ ಚಿಟ್ಟೆ** © ಡಾ. ಅಶ್ವಥ ಕೆ. ಎನ್.

ಏಷ್ಯಾ, ಆಸ್ಟ್ರೇಲಿಯಾ ಮತ್ತು ಆಫ್ರಿಕಾ ಖಂಡಗಳ ವಿವಿಧ ಪ್ರದೇಶಗಳ ಸಮತಟ್ಟು ಪ್ರದೇಶ, ಕುರುಚಲು ಕಾಡುಗಳು, ಎಲೆ ಉದುರುವ ಮತ್ತು ನಿತ್ಯಹರಿದ್ವರ್ಣ ಕಾಡುಗಳಲ್ಲಿ ಕಂಡುಬರುವ ಈ ಹಳದಿ ಚಿಟ್ಟೆಯು ಪಿಯರಿಡೇ (Pieridae) ಕುಟುಂಬಕ್ಕೆ ಸೇರುತ್ತದೆ. ಇದನ್ನು ವೈಜ್ಞಾನಿಕವಾಗಿ ಯುರೆಮಾ ಹೆಕಾಬೆ (*Eurema hecabe*) ಎಂದು ಕರೆಯಲಾಗುತ್ತದೆ. ಗಾತ್ರದಲ್ಲಿ 40-50 ಮಿ. ಮೀಟರ್ ಇರುವ ಈ ಚಿಟ್ಟೆಯ ರೆಕ್ಕೆಗಳು ಹಳದಿ ಬಣ್ಣವಿದ್ದು, ಮೇಲಿನ ರೆಕ್ಕೆಗಳಲ್ಲಿ ಕಡುಗಂದು ಬಣ್ಣದ ಅಂಚು ಹಾಗೂ ಹಿಂಭಾಗದಲ್ಲಿ ಕಪ್ಪು ಮಚ್ಚೆಗಳನ್ನು ಹೊಂದಿರುತ್ತವೆ. ಪೊದೆಗಳಲ್ಲಿ, ಹೂ-ಗಿಡ ಮತ್ತು ಆಹಾರ ಸಸ್ಯಗಳ ಬಳಿ ನೆಲಕ್ಕೆ ಸಮೀಪವಾಗಿ ಹೆಚ್ಚಾಗಿ ಕಾಣಿಸುತ್ತವೆ ಮತ್ತು ಗುಂಪುಗಳಲ್ಲಿ ತೇವಾಂಶವಿರುವ ಮಣ್ಣಿನ ಮೇಲೆ ಕುಳಿತು ಖನಿಜಗಳನ್ನು ಹೀರಿಕೊಳ್ಳುತ್ತವೆ. ಫ್ಯಾಬೇಸಿ (Fabaceae) ಕುಟುಂಬದ ಅಗಸೆ ಮರ, ಕಕ್ಕೆ ಗಿಡ, ಕೆಂಪು ತುರಾಯಿ ಮರ, ಮೈಮೊಸೇಸಿ (Mimosaceae) ಕುಟುಂಬದ ಮುಟ್ಟಿದರೆ ಮುನಿ ಗಿಡ ಮುಂತಾದವು ಇವುಗಳ ಆತಿಥೇಯ ಸಸ್ಯಗಳಾಗಿವೆ.



**ಮಲೈ ಕ್ರೂಸರ್** © ಡಾ. ಅಶ್ವಥ ಕೆ. ಎನ್.

ದಕ್ಷಿಣ ಏಷ್ಯಾದ ಕಾಡುಗಳಲ್ಲಿ ಕಂಡುಬರುವ ಈ ಚಿಟ್ಟೆಯು ನಿಂಫಾಲಿಡೆ (Nymphalidae) ಕುಟುಂಬಕ್ಕೆ ಸೇರುತ್ತದೆ. ಇದನ್ನು ವೈಜ್ಞಾನಿಕವಾಗಿ ವಿಂದುಲಾ ಡೆಜೋನ್ (*Vindula dejone*) ಎಂದು ಕರೆಯಲಾಗುತ್ತದೆ. ಗಾತ್ರದಲ್ಲಿ 60-80 ಮಿ. ಮೀಟರ್ ಇರುವ ಗಂಡು ಮತ್ತು ಹೆಣ್ಣು ಚಿಟ್ಟೆಗಳು ವಿಭಿನ್ನ ಬಣ್ಣಗಳಲ್ಲಿರುತ್ತವೆ. ಗಂಡು ಚಿಟ್ಟೆಯು ಕಿತ್ತಳೆ ಮಿಶ್ರಿತ ಕಂದು ಬಣ್ಣದಲ್ಲಿದ್ದರೆ, ಹೆಣ್ಣು ತಿಳಿ ಹಸಿರು ಮಿಶ್ರಿತ ಬೂದು ಬಣ್ಣದಲ್ಲಿರುತ್ತದೆ. ಹಿಂಭಾಗದ ರೆಕ್ಕೆಯ ಮೇಲೆ ಸಣ್ಣ ಬಾಲವನ್ನು ಹೊಂದಿರುತ್ತದೆ. ಗಂಡು ಚಿಟ್ಟೆಗಳು ಸಾಮಾನ್ಯವಾಗಿ ಕೊಳೆಯುವ ಸಾವಯವ ವಸ್ತುಗಳು, ಸತ್ತ ಮಾಂಸ ಮತ್ತು ಮೂತ್ರದಿಂದ ಕೂಡಿದ ಹೊಳೆಗಳ ದಡಗಳಲ್ಲಿ, ಕೆಸರು ಗದ್ದೆಗಳಲ್ಲಿ ಹೆಚ್ಚಾಗಿ ಕಾಣಬಹುದು. ಬಿಸಿಲಿಗೆ ರೆಕ್ಕೆಗಳನ್ನು ತೆರೆದು ಕೂರುತ್ತದೆ. ಪ್ಯಾಸಿಫ್ಲೋರೇಸಿ (Passifloraceae) ಕುಟುಂಬದ ಕಾಡು ತೊಂಡೆ ಬಳ್ಳಿಯು ಇದರ ಆತಿಥೇಯ ಸಸ್ಯವಾಗಿದೆ.



**ಕಪಿಲ ಚಿಟ್ಟೆ** © ಡಾ. ಅಶ್ವಥ ಕೆ. ಎನ್.

ಆಗ್ನೇಯ ಏಷ್ಯಾ ಮತ್ತು ಉತ್ತರ ಆಸ್ಟ್ರೇಲಿಯಾದ ವಿವಿಧ ಪ್ರದೇಶಗಳಲ್ಲಿನ ಸಮತಟ್ಟು ಪ್ರದೇಶ, ಕುರುಚಲು ಕಾಡುಗಳು, ನಿತ್ಯ ಹರಿದ್ವರ್ಣ ಕಾಡುಗಳು, ಎಲೆ ಉದುರುವ ಕಾಡುಗಳಲ್ಲಿ ಕಂಡುಬರುವ ಈ ಕಪಿಲ ಚಿಟ್ಟೆಯು ನಿಂಫಾಲಿಡೆ (Nymphalidae) ಕುಟುಂಬಕ್ಕೆ ಸೇರುತ್ತದೆ. ಇದನ್ನು ವೈಜ್ಞಾನಿಕವಾಗಿ ಅಕ್ರೇಯಾ ಟೆರ್ಪ್ಸಿಕೋರ್ (*Acraea terpsicore*) ಎಂದು ಕರೆಯಲಾಗುತ್ತದೆ. ಗಾತ್ರದಲ್ಲಿ 50-65 ಮಿ. ಮೀಟರ್ ಇರುವ ಇವುಗಳ ರೆಕ್ಕೆಗಳು ಕಿತ್ತಳೆ ಬಣ್ಣವಿದ್ದು, ಅಲ್ಲಲ್ಲಿ ಕಪ್ಪು ಚುಕ್ಕೆಗಳಿರುತ್ತವೆ. ಕೆಳಗಿನ ರೆಕ್ಕೆಯ ಹಿಂಭಾಗದ ಅಂಚಿನಲ್ಲಿ ಕಪ್ಪು ವರ್ತುಲವಿರುವ ಬಿಳಿ ಮಚ್ಚೆಗಳಿರುತ್ತವೆ. ಹೂಗಳ ಮೇಲೆ ಹೆಚ್ಚಾಗಿ ಕಾಣಸಿಗುವ ಇವುಗಳು ಪರಭಕ್ಷಕರಿಗೆ ವಿಷಕಾರಿಯಾಗಿವೆ. ಪಾಸಿಫ್ಲೋರೇಸಿ (Passifloraceae) ಕುಟುಂಬದ ಜ್ಯೂಸ್ ಹಣ್ಣಿನ (passion fruit) ಪ್ರಭೇದದ ವಿವಿಧ ಸಸ್ಯಗಳು ಇವುಗಳ ಆತಿಥೇಯ ಸಸ್ಯಗಳಾಗಿವೆ.



**ಕಮಾಂಡರ್ ಚಿಟ್ಟೆ** © ಡಾ. ಅಶ್ವಥ ಕೆ. ಎನ್.

ದಕ್ಷಿಣ ಮತ್ತು ಆಗ್ನೇಯ ಏಷ್ಯಾದ ವಿವಿಧ ಪ್ರದೇಶಗಳ ತೇವಾಂಶವಿರುವ ನಿತ್ಯ ಹರಿದ್ವರ್ಣ ಕಾಡುಗಳು, ಎಲೆ ಉದುರುವ ಕಾಡುಗಳಲ್ಲಿ ಕಂಡುಬರುವ ಈ ಕಮಾಂಡರ್ ಚಿಟ್ಟೆಯು ನಿಂಫಾಲಿಡೆ (Nymphalidae) ಕುಟುಂಬಕ್ಕೆ ಸೇರುತ್ತದೆ. ಇದನ್ನು ವೈಜ್ಞಾನಿಕವಾಗಿ ಮಾಡುಜಾ ಪ್ರೊಕ್ರಿಸ್ (*Moduza procris*) ಎಂದು ಕರೆಯಲಾಗುತ್ತದೆ. ಗಾತ್ರದಲ್ಲಿ 60-75 ಮಿ. ಮೀಟರ್ ಇರುವ ಈ ಚಿಟ್ಟೆಯ ಮೇಲಿನ ರೆಕ್ಕೆಗಳು ಕಂದು ಮಿಶ್ರಿತ ಕೆಂಪು ಬಣ್ಣವಿದ್ದು, ಮಧ್ಯಭಾಗದಲ್ಲಿ ದೊಡ್ಡದಾದ ಬಿಳಿ ಚುಕ್ಕೆಗಳ ಪಟ್ಟಿಯನ್ನು ಹೊಂದಿವೆ. ಇದು ವೇಗವಾಗಿ ಹಾರಾಡುತ್ತದೆ ಮತ್ತು ಕುಳಿತಾಗ ರೆಕ್ಕೆಯನ್ನು ಹಿಂದೆ ಮುಂದೆ ಆಡಿಸುತ್ತದೆ ಹಾಗೂ ತೇವಾಂಶವಿರುವ ಮಣ್ಣಿನ ಮೇಲೆ ಕುಳಿತು ಖನಿಜಗಳನ್ನು ಹೀರಿಕೊಳ್ಳುತ್ತದೆ. ಕ್ಯಾಪರೇಸೀ (Capparaceae) ಕುಟುಂಬದ ಮರಗಾಡೆ ಗಿಡ, ರೋಸೇಸಿ (Rosaceae) ಕುಟುಂಬದ ಬಾದಾಮಿ ಮರ, ರುಬಿಯೇಸಿ (Rubiaceae) ಕುಟುಂಬದ ನೀರು ಕದಂಬ, ಕದಂಬ, ಬೆಳ್ಳೋತಿ ಮರಗಳು ಇವುಗಳ ಆತಿಥೇಯ ಸಸ್ಯಗಳಾಗಿವೆ.

**ಚಿತ್ರ: ಡಾ. ಅಶ್ವಥ ಕೆ. ಎನ್.**

**ಲೇಖನ: ದೀಪ್ತಿ ಎನ್.**

# ನೀವೂ ಕಾನನಕ್ಕೆ ಬರೆಯಬಹುದು




ಜೀವವೈವಿಧ್ಯತೆಯ ಆಗರವಾದ ನಮ್ಮ ಪ್ರಕೃತಿಯು, ಒಂದು ವಿಸ್ಮಯವೇ ಸರಿ. ಈ ಅಗಣಿತ ಜೀವ-ಜಂತುಗಳಲ್ಲಿ, ಲೆಕ್ಕಕ್ಕೆ ಸಿಗುವಂತಹವು ಒಂದಷ್ಟಾದರೆ, ಲೆಕ್ಕದ ಪರಿಧಿಗೇ ಬಾರದವು ಎಷ್ಟೋ? ವೈವಿಧ್ಯಮಯವಾದ ಮರ-ಗಿಡಗಳು, ಪ್ರಾಣಿಗಳು, ಚಿಲಿಪಿಲಿಗುಟ್ಟುವ ಹಕ್ಕಿಗಳು ಹಾಗೂ ಕ್ರಿಮಿಕೀಟಗಳು ಪರಸ್ಪರ ಸಂಬಂಧವನ್ನು ಹೊಂದಿವೆ ಮತ್ತು ಪರಸ್ಪರಾವಲಂಬಿಯಾಗಿ ನಿಸರ್ಗದಲ್ಲಿ ಸಮತೋಲನವನ್ನು ಕಾಯ್ದುಕೊಳ್ಳುವಲ್ಲಿ ಮಹತ್ತರ ಪಾತ್ರವಹಿಸುತ್ತವೆ. ಅದಕ್ಕೆಂದೇ ಈ ಜೀವವೈವಿಧ್ಯವನ್ನು ಕಾಪಾಡುವ ಅವುಗಳನ್ನು ಉಳಿಸಿ, ಬೆಳೆಸುವ ಸಂಕಲ್ಪದೊಂದಿಗೆ ಪ್ರತಿ ವರ್ಷ ಮೇ 22 ರಂದು ಅಂತರಾಷ್ಟ್ರೀಯ ಜೀವವೈವಿಧ್ಯ ದಿನವನ್ನಾಗಿ ಆಚರಿಸಲಾಗುತ್ತದೆ. ಇದೀಗ 25 ವರ್ಷಗಳಿಂದ ಈ ದಿನವನ್ನು ಆಚರಿಸಲಾಗುತ್ತಿದ್ದು, ರಾಷ್ಟ್ರೀಯ ಮತ್ತು ಜಾಗತಿಕ ಮಟ್ಟದಲ್ಲಿ ಕಾರ್ಯಕ್ರಮಗಳನ್ನು ಆಯೋಜಿಸಿ, ಜೀವ ವೈವಿಧ್ಯದ ಸಂರಕ್ಷಣೆಯ ಕುರಿತು ಜಾಗೃತಿ ಮೂಡಿಸಲು ಸಂಕಲ್ಪ ಮಾಡಲಾಗುತ್ತಿದೆ. ಅಭಿವೃದ್ಧಿಯ ಹೆಸರಿನಲ್ಲಿ ಅರಣ್ಯ ನಾಶ, ರಸ್ತೆ, ಕಾರ್ಖಾನೆಗಳ ನಿರ್ಮಾಣ ಜೀವವೈವಿಧ್ಯತೆಯ ಮಾರಣಹೋಮಕ್ಕೆ ನಾಂದಿಯಾಡುತ್ತಿವೆ. ಆದ್ದರಿಂದಲೇ ಇಂದು ಹಲವು ಪ್ರಾಣಿಗಳು ಅಳಿವಿನಂಚಿಗೆ ತಲುಪಿವೆ. ಹಾಗಾಗಿ ನಾವೆಲ್ಲರೂ ಈ ಅಮೂಲ್ಯ ಜೀವಸಂಕುಲವನ್ನು ರಕ್ಷಿಸುವ ಸಲುವಾಗಿ ಟೊಂಕ ಕಟ್ಟಿ ನಿಲ್ಲಬೇಕಾಗಿದೆ.

ಈ ರೀತಿಯ ಪರಿಸರದ ಬಗೆಗಿನ ಮಾಹಿತಿಯನ್ನು ಒದಗಿಸಲು ಇರುವ ಕಾನನ ಇ-ಮಾಸಿಕಕ್ಕೆ ಮುಂದಿನ ತಿಂಗಳ ಸಂಚಿಕೆಗೆ ಲೇಖನಗಳನ್ನು ಆಹ್ವಾನಿಸಲಾಗಿದೆ. ಆಸಕ್ತರು ಪರಿಸರಕ್ಕೆ ಸಂಬಂಧಿಸಿದ ಕಥೆ, ಕವನ, ಛಾಯಾಚಿತ್ರ, ಚಿತ್ರಕಲೆ, ಪ್ರವಾಸ ಕಥನಗಳನ್ನು ಕಾನನ ಮಾಸಿಕದ ಇ-ಮೇಲ್ ವಿಳಾಸಕ್ಕೆ ಕಳುಹಿಸಬಹುದು.

**ಕಾನನ ಪತ್ರಿಕೆಯ ಇ-ಮೇಲ್ ವಿಳಾಸ**: kaanana.mag@gmail.com
**ಅಂಚೆ ವಿಳಾಸ**:

ವೈಲ್ಡ್ ಲೈಫ್ ಕನ್ಸರ್ವೇಷನ್ ಗ್ರೂಪ್,
ಅಡವಿ ಫೀಲ್ಡ್ ಸ್ಟೇಷನ್,
ಒಂಟೆಮಾರನ ದೊಡ್ಡಿ, ರಾಗಿಹಳ್ಳಿ ಅಂಚೆ,
ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ,

ಪಿನ್ ಕೋಡ್ : 560083. ಗೆ ಕಳಿಸಿಕೊಡಬಹುದು.



## ಪರಿಸರದ ಬಗೆಗಿನ ಏಕೈಕ ಕನ್ನಡ ಇ–ಮಾಸಿಕಕ್ಕೆ ನೀವೂ ಸಹ ಕೈ ಜೋಡಿಸಿ

## Join hands with the only Kannada e-magazine on environment

**ಕಾನನ ಪತ್ರಿಕೆಯು ಹಲವಾರು ಸ್ವಯಂ ಸೇವಕರ ಸಹಾಯದಿಂದ ಯಶಸ್ವಿಯಾಗಿ ೧೫ ವರ್ಷಗಳಿಂದ ಪ್ರಕಟವಾಗುತ್ತಿದ್ದರೂ, ಅದರ ನಿರ್ವಹಣೆಗೆ (website) ಸ್ವಲ್ಪ ವೆಚ್ಚ ತಗುಲುತ್ತದೆ. ಆದ ಕಾರಣ ಸಹಾಯ ಮಾಡಲು ಇಚ್ಚಿಸುವ ದಾನಿಗಳು ದೇಣಿಗೆ ನೀಡುವ ಮೂಲಕ ಪ್ರೋತ್ಸಾಹಿಸಿ ಸಹಕರಿಸಬಹುದು.**

**With the help of many volunteers kaanana is reaching thousands of readers from past 15 years. But it requires some amount for its maintenance. Hence we request interested candidates to support kaanana by donating.**

**Account details are as below ***

**Bank Name: Bank of Baroda**
**Account type: Current account**
**Account no: 67560200001138**
**Account Name: Wildlife Conservation Group**
**IFSC Code: BARB0VJRAGI (zero in middle)**

**SCAN TO PAY**
**WITH ANY BHIM UPI APP**
Merchant Name : WILDLIFE CONSERVATION GROUP



***- Donations are exempted from Income Tax under section 80 G (IT act 1961)**